ಶ್ರೀ ಕೆ. ಎಚ್. ಶ್ರೀನಿವಾಸ್.--ಈ ಹಿಂದೆ ಸಹ ಆದಷ್ಟೂ ಬೇಗ ಸಮಿತಿ ನೇಮಕ ಮಾಡುವುದಾಗಿ ಹೇಳಿದ್ದಿರಿ ಆದರೆ ಇಲ್ಲಿಯವರೆಗೆ ಮಾಡಲಿಲ್ಲ. ಆದಷ್ಟೂ ಬೇಗ ಎಂದರೆ ಇನ್ನು ಒಂದು ವಾರದಲ್ಲಿಯೇ ಅಥವಾ ೧೫ ದಿವಸಗಳಲ್ಲಿಯೇ ಎಂಬುದನ್ನು ತಾವು ತಿಳಿಸಬೇಕು. ಕೊನೆಯಪಕ್ಷ ಈ ಅಧಿವೇಶನ ಮುಗಿಯುವುದರೊಳಗಾದರೂ ಮಾಡುತ್ತೀರಾ ಎಂಬುದನ್ನು ಹೇಳಬೇಕು ?

ಶ್ರೀ ಬಿ. ಎ. ಜೀವಿಜಯ.--ಇದು ತಡವಾಗಲು ಕಾರಣವೆಂದರೆ, ಈ ಮೊದಲು ಅಸಿಸ್ಟೆಂಟ್ ಕಮರ್ಷಿಯಲ್ ಸರ್ವೇಟರ್ ಆಫ್ ಫಾರೆಸ್ಟ್ ಜೊತೆಗೆ ತಹಶೀಲ್ದಾರರು ಇರಬೇಕೆಂದು ತೀರ್ಮಾನವಾಗಿತ್ತು. ಆದರೆ ಈಗ ತಹಶೀಲ್ದಾರರ ಬದಲಿಗೆ ಅಸಿಸ್ಟೆಂಟ್ ಕಮೀಷನರ್ ಅವರು ಇರಲಿ ಎಂದು ರೆವಿನ್ಯೂ ಇಲಾಖೆಯವರನ್ನು ಕೇಳಿದ್ದೇವೆ. ಇದಕ್ಕೆ ಅವರ ಒಪ್ಪಿಗೆ ಸಿಕ್ಕಿದ ಕೂಡಲೇ ಆ ಸಮಿತಿಯನ್ನು ನೇಮಕ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.--ಇಲ್ಲಿ ೩೦೬.೨೪ ಹೆಕ್ಟರ್ ಪ್ರದೇಶ ಮಾತ್ರ ಅತಿಕ್ರಮಣವಾಗಿದೆ ಎಂದು ಹೇಳಿದ್ದಾರೆ. ಆದರೆ ಇದು ಸರಿಯಲ್ಲ. ನಾನು ಕಂದಾಯ ಸಚಿವನಾಗಿದ್ದಾಗ ಈ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಪಡೆದಿದ್ದೆ. ಆ ರ ಪ್ರಕಾರ ಹೇಳಬೇಕೆಂದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೂ ಪಶ್ಚಿಮಘಟ್ಟ ಪ್ರದೇಶದಲ್ಲಿ ಕಾಫಿ ಬೆಳೆಗಾರರು ಸುಮಾರು ೨೨ ಸಾವಿರ ಹೆಕ್ಟರ್ ಪ್ರದೇಶವನ್ನು ಅತಿಕ್ರಮಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.--೩೦೬.೨೪ ಹೆಕ್ಟರ್ ಪ್ರದೇಶ ಅತಿಕ್ರಮಣವಾಗಿದೆ ಎಂದು ಇಲ್ಲಿ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.--ಅದು ಸರಿಯಲ್ಲ. ಅದಕ್ಕಿಂತ ಜಾಸ್ತಿ ಅತಿಕ್ರಮಣವಾಗಿದೆ. ಆದ್ದರಿಂದ ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ಎ. ಜೀವಿಜಯ.--ಆಗಬಹುದು. ರೆವಿನ್ಯೂ ಇಲಾಖೆಗೆ ಸೇರಿದ ಮತ್ತು ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಕಾಫಿ ಬೆಳೆಗಾರರು ಅತಿಕ್ರಮಣ ಮಾಡಿದರೆ, ಅಂತಹ ಜಮೀನುಗಳನ್ನು ಕೇಂದ್ರ ಸರ್ಕಾರದ ಅನುಮತಿ ಪಡೆದುಕೊಂಡು ರೆಗ್ಯುಲರೈಟ್ ಮಾಡಬೇಕಾಗುತ್ತದೆ. ಅವರು ಅನುಮತಿ ಕೊಡದಿದ್ದರೆ ರೆಗ್ಯುಲರೈಜ್ ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರದ ಗೈಡ್-ಲೈನ್ಸ್ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಇನ್ನೂ ಒಪ್ಪಿಕೊಂಡಿಲ್ಲ. ಮೊನ್ನೆ ನವದೆಹಲಿಗೆ ಹೋಗಿದ್ದಾಗ ಇದೇ ವಿಚಾರದಲ್ಲಿ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಚರ್ಚೆ ನಡೆಸಿದಾಗ, ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಹೊರತು ರೆಗ್ಯುಲರೈಜ್ ಮಾಡುತ್ತೇವೆಂದು ನನಗೆ ಭರವಸೆ ಕೊಡಲಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟರೆ ರೆಗ್ಯುಲರೈಜ್ ಮಾಡುತ್ತೇವೆ, ಇಲ್ಲದಿದ್ದರೆ ಅತಿಕ್ರಮಣ ಮಾಡಿದವರನ್ನು ಅಲ್ಲಿಂದ ಹೊರ ಹಾಕುತ್ತೇವೆ.

ಕೃಷ್ಣ ಮೇಲ್ದಂಡೆ ಯೋಜನೆಗಾಗಿ ಮಿಾಸಲಾಗಿರುವ ಪೊತ್ತ

೫೮೨. ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).--ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಪುನರ್ವಿಮರ್ಶಿಸಿದ ನಂತರ ದೊರಕಬಹುದಾದ ಹೆಚ್ಚುವರಿ ನೀರು ಸೇರಿದಂತೆ ಕೆ. ಜಿ. ಕಮಿಷನ್‌ನಿಂದ ನಿಗದಿತವಾದ ಪೂರ್ತ ನೀರನ್ನು ಕ್ರಿ. ಶ. ೨೦೦೦ ಇಸವಿಯೊಳಗೆ ಬಳಸಿಕೊಳ್ಳಲು ಸುಮಾರು ೨೮ ಲಕ್ಷ ಎಕರೆ ನೀರಾವರಿಯಾಗುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲಘಟ್ಟ ಹಾಗೂ ಎರಡನೇ ಘಟ್ಟದ ವೆಚ್ಚ,

(ಆ) ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ೧೯೮೬-೮೭ನೇ ಸಾಲಿಗಾಗಿ ನಿಗದಿಯಾದ ಪೊತ್ತ,

(ಇ) ಬೆಲೆ ಹೆಚ್ಚಳವನ್ನು ಗಮನಿಸಿ ಈಗ ನಿಗದಿ ಮಾಡುತ್ತಿರುವ ಪೊತ್ತದಿಂದ ನಿಗದಿತ ಪೂರ್ತ ನೀರನ್ನು ಉಪಯೋಗಿಸಲು ಸಾಧ್ಯವಾಗುವುದೆ,

(ಈ) ಇಲ್ಲದಿದ್ದಲ್ಲಿ, ಸರ್ಕಾರವು ಈ ದಿಸೆಯಲ್ಲಿ ತೆಗೆದುಕೊಳ್ಳಬೇಕೆಂದಿರುವ ಕ್ರಮಗಳು (ವರ್ಷವಾರು ಹಾಗೂ ಎಕರೇವಾರು ವಿವರಗಳನ್ನು ಕೊಡತಕ್ಕದ್ದು),

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಅಭಿವೃದ್ಧಿ, ಮತ್ತು ನೀರಾವರಿ ಸಚಿವರು).--

(ಅ) ೪.೨೫ ಲಕ್ಷ ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟವ ಪುಂಜೂರಾದ ಪುನರ್ವಿಮರ್ಶಿತ ಅಂದಾಜು ವೆಚ್ಚ ೧೯೮೬-೮೪ ದರ ಪಟ್ಟಿಯ ಆಧಾರದಂತೆ ೧೦೭೧.೧೦ ಕೋಟಿ ರೂ ಗಳು. ಕೃಷ್ಣಾಮೇಲ್ದಂಡೆ ಯೋಜನೆಯು ಎರಡನೇ ಘಟ್ಟದ ವಿವರಗಳನ್ನು ತಯಾರಿಸಲಾಗುತ್ತಿದೆ.

(ಆ) ೧೯೮೬-೮೭ನೇ ಸಾಲಿಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ನಿಗದಿ ಮಾಡುವ ಮೊತ್ತವನ್ನು ನಿರ್ಧರಿಸಲಾಗುತ್ತಿದೆ.

(ಇ) ಕೃಷ್ಣಾ ಮೇಲ್ದಂಡೆ ಯೋಜನೆಗೆ ನಿಗದಿ ಮಾಡಿರುವ ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ.

(ಈ) ಉದ್ಭವಿಸುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.--ಪ್ರೊಫೆಸರ್ ಲಕ್ಷ್ಮೀಸಾಗರ್ ಅವರು ಕೊಡತಕ್ಕಂಥ ರೀತಿಯ ಉತ್ತರವನ್ನು ನಾವು ಶ್ರೀಮಾನ್ ದೇವೇಗೌಡರಿಂದ ನಿರೀಕ್ಷಿಸಿರಲಿಲ್ಲ. ಮೊದಲನೇ ಹಂತದ ಬಗ್ಗೆ ೧೦೭೧ ಕೋಟಿ ರೂಪಾಯಿ ೧೯೮೬-೮೪ರ ದರಪಟ್ಟಿಯ ಆಧಾರದ ಪ್ರಕಾರ ಆಗುತ್ತದೆ ಎಂದು ಹೇಳಿದ್ದಾರೆ. ಎರಡನೇ ಹಂತದ್ದು ಇನ್ನೂ ತಯಾರು ಮಾಡಿಲ್ಲವೆಂದು ಹೇಳಿದ್ದಾರೆ. ಇದನ್ನು ಯಾವಾಗ ಮಾಡುತ್ತೀರಿ ಎಂಬುದರ ಬಗ್ಗೆ ನಿಶ್ಚಿತವಾದ ಭರವಸೆಯನ್ನು ಈ ಸದನಕ್ಕೆ ಕೊಡುತ್ತೀರಾ ? ಈ ಹಿಂದೆ ತಾವು ಸಾರ್ವಜನಿಕ ಸಭೆಯಲ್ಲಿ ಆಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಕನಿಷ್ಠ ಪ್ರತಿವರ್ಷ ನೂರು ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಇದು ಕೂಡ ಸಾಕಾಗುವುದಿಲ್ಲ. ಈ ರೀತಿ ಆದರೆ, ತಾವು ಎರಡು ಸಾವಿರ ಇಸವಿಯ ಒಳಗಡೆ ಸಂಪೂರ್ಣವಾಗಿ ನೀರನ್ನು ಬಳಕೆ ಮಾಡುತ್ತೇವೆ, ಒಂದು ಪೈಸೆ ಕೂಡ ಪೋಲು ಮಾಡುವುದಿಲ್ಲ ಎಂದು ಹೇಳಿದ್ದೀರಿ. ಈ ದೃಷ್ಟಿಯೊಳಗೆ ತಾವು ಈ ಫೇಸ್‌ಡ್ ಪ್ರೋಗ್ರಾಂಗೆ ಪ್ರತಿವರ್ಷ ಎಷ್ಟು ಹಣ ಖರ್ಚು ಮಾಡುತ್ತೀರಿ ? ಎಷ್ಟು ಎಕರೆ ಪ್ರದೇಶಕ್ಕೆ ನೀರು ಒದಗಿಸುತ್ತೀರಿ ? ಎನ್ನುವುದರ ಬಗ್ಗೆ ಯಾವುದಾರೂ ನೀತಿ ನಿರೂಪಣೆ ಅಥವಾ ದೃಢನಿರ್ಧಾರವನ್ನು ಸರ್ಕಾರ ಪ್ರಕಟಿಸಿದರೆ ಮಾತ್ರ ಶಾಶ್ವತವಾದಂಥ ಬರಗಾಲ ಪೀಡಿತ ಪ್ರದೇಶಗಳಿಗೆ ಏನಾದರೂ ಸಹಾಯ ಮಾಡಿದಂತೆ ಆಗುತ್ತದೆ. ಅಲ್ಲಿಯ ಜನರಿಗೆ ನೆಮ್ಮದಿ ಸಿಗುತ್ತದೆ. ಈ ಸರ್ಕಾರ ಕೆಲಸ ಮಾಡುತ್ತಿದೆ ಎನ್ನುವುದು ಜನರಿಗೆ ಸಮಾಧಾನ ಕೊಡುತ್ತದೆ. ಈ ಕಾರಣ ತಾವು ದಯವಿಟ್ಟು ಜರೂರಾಗಿ ಯಾವರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೀರಿ ಎಂಬುದನ್ನು ಈಗಾಗಲೇ ತಿಳಿಸಿ, ತೆಲುಗುಗಂಗಾದ್ದು ತಲೆಮೇಲೆ ಖಡ್ಗ ಇಳಿಬಿಟ್ಟಹಾಗೆ ಇದೆ. ೧೯೮೦-೮೯ರಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಬಚಾವತ್ ನ್ಯಾಯ ಪಂಚಾಯತ್ ಶಿಫಾರಸ್ಸು ಪ್ರಕಾರ ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು ಬಳಸುವ ಹಕ್ಕು ಆಂಧ್ರಪ್ರದೇಶಕ್ಕೆ ಇದೆ, ಇತರ ರಾಜ್ಯಗಳಿಗೆ ಇದರ ಬಗ್ಗೆ ಆಕ್ಷೇಪ ಎತ್ತುವ ಅವಕಾಶ ಇಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. 'ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು ಎರಡು ಸಾವಿರ ನೇ ಇಸವಿಯವರೆಗೆ ಬಳಸಲು ನಾವೇ ಸೌರ್ವಭೌಮರು, ಯಾರೂ ನಮ್ಮನ್ನು ತಡೆಯಲಾರರು" ಎಂದು ಹೇಳಿದ್ದಾರೆ. ಇದನ್ನು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಉಪಾಧ್ಯಕ್ಷರು.--ಕ್ಲಾರಿಫಿಕೇಶನ್ ಮಾತ್ರ ಕೇಳಬೇಕು. ಹೀಗೆ ಪ್ರಶ್ನೆ ಕೇಳುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಅರ್ಧಗಂಟೆಯ ಚರ್ಚೆಯೇ ಬೇಕಾಗುತ್ತದೆ.

ಶ್ರೀ ಎಸ್. ಎಸ್. ಕಡಪಟ್ಟಿ.--ಅರ್ಧಗಂಟೆ ಚರ್ಚೆಗೆ ಅವರು ಒಪ್ಪಿಕೊಂಡರೆ ಪರವಾಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.--ಸ್ವಾಮಿ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರ ಯಾವುದೇ ವಿಷಯವನ್ನು ಈ ಸದನದ ಗಮನಕ್ಕೆ ತರದೆ ಮುಚ್ಚಿಡತಕ್ಕಂಥ ಸನ್ನಿವೇಶಕ್ಕೆ ನಾವು

ಹೋಗುವುದಿಲ್ಲ. ಇಷ್ಟನ್ನು ನಾನು ಮಾನ್ಯ ಶ್ರೀ ಕಡಪಟ್ಟಿಯವರಿಗೆ ಸ್ಪಷ್ಟೀಕರಣ ಮಾಡುತ್ತೇನೆ, ಏನೆಂದರೆ, ಎರಡು ಸಾವಿರ ಇಸವಿ ಒಳಗೆ ಎಲ್ಲಾ ನೀರನ್ನು ನಾವು ಉಪಯೋಗ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಆಶ್ವಾಸನೆ ಕೊಡಬೇಕೆಂದು ಹೇಳಿದ್ದಾರೆ. ಮುಖ್ಯವಾದ ಉದ್ದೇಶ ಅದು. ಸ್ವಾಮಿ, ನಮ್ಮ ಮುಂದಿರತಕ್ಕಂಥಾದ್ದು ಫಸ್ಟ್ ಸ್ಟೇಜ್‌ನಲ್ಲಿ ೧೧೯ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವುದು, ಎರಡನೇ ಸ್ಟೇಜ್‌ನದ್ದು ಎಸ್ಟಿಮೇಟ್ ತಯಾರು ಮಾಡುತ್ತಿದ್ದೇವೆ ಇದಕ್ಕೆ ಪೂರಕವಾದಂಥ ಕೆಲವು ಅಂಕಿಅಂಶಗಳು ಬೇಕು ಎಂದು ಹೇಳಿದ್ದೇನೆ. ೧೧೯ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರೆ ನಾವು ಖರ್ಚು ಮಾಡಬೇಕಾಗಿರುವ ಹಣ ೧೦೭೧ ಕೋಟಿ ರೂಪಾಯಿ. ಅದು ಈಗಿನ ಪುನರ್ ವಿಮರ್ಶಿತ ಅಂದಾಜಿನ ಪ್ರಕಾರ. ಇದರಲ್ಲಿ ಈಗಾಗಲೇ ಖರ್ಚು ಮಾಡಿರತಕ್ಕಂಥಾದ್ದು ೩೬೬ ಕೋಟಿ. ಇನ್ನು ಉಳಿದಿರತಕ್ಕಂಥ ಹಣ ೭೧೧ ಕೋಟಿ ಖರ್ಚು ಮಾಡಿದರೆ ನಾವು ೧೧೯ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬಹುದು. ಇದಕ್ಕೆ ನಮ್ಮ ಗುರಿ ೧೯೫೫–೬೬ ರೊಳಗೆ ಇಷ್ಟು ೧೧೯ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬೇಕು. ಇದರ ಪೂರ್ಣ ಬಳಕೆ ಮಾಡಿಕೊಳ್ಳಬೇಕೆಂದು ರಾಜ್ಯ ಸರ್ಕಾರ ದೃಢ ನಿರ್ಣಯ ಮಾಡಿದೆ ಇನ್ನು ೭೩೪ ಟಿ.ಎಂ.ಸಿ. ನೀರು ಬಚಾವತ್ ಅವಾರ್ಡ್ ಪ್ರಕಾರ ಏನಿದೆ, ಅದರ ಪೈಕಿ ೧೧೯ ಟಿ.ಎಂ.ಸಿ. ಹೋದರೆ ಉಳಿದುದನ್ನು ನಾವು ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಇದು ಎರಡನೇ ಸ್ಟೇಜ್‌ಗೆ ಹೋಗತಕ್ಕದ್ದು. ಆದರೆ ಎರಡು ಸಾವಿರ ಇಸವಿ ಏನು ಡೆಡ್‌ಲೈನ್‌ಹಾಕಿ ೩೧ ಟಿ.ಎಂ.ಸಿ ನೀರನ್ನು ಮತ್ತೆ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ ಅದಕ್ಕೆ ೨೫೦ ಕೋಟಿ ಬೇಕು. ಆಂದರೆ ಅಲ್ಲಿಂದ ಮುಂದೆ ೯೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ೨ ಸಾವಿರ ಇಸವಿಯೊಳಗೆ ಪೂರ್ಣ ನೀರನ್ನು ಬಳಕೆ ಮಾಡುವುದಕ್ಕೆ ಬರುತ್ತದೆ ಅದಕ್ಕೆ ಪ್ರತಿವರ್ಷ ಕನಿಷ್ಪಪಕ್ಷ ಒಂದುನೂರು ಕೋಟಿ ರೂಪಾಯಿಗಳನ್ನಾದರೂ ಈ ಯೋಜನೆಗೆ ಖರ್ಚು ಮಾಡಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಇದರ ಬಗ್ಗೆ ಯಾವುದೇ ವಿವಾದ ಇಲ್ಲ. ವಿವಾದವಿರುವುದು ಏನೆಂದರೆ, ಎರಡು ಸಾವಿರ ವರ್ಷದೊಳಗೆ ಯಾರೇ ಆಗಲಿ, ನಾಳೆ ಇನ್ನೊಬ್ಬರು ಮಂತ್ರಿ ಯಾಗಿರಬಹುದು, ಇದು ಈ ರಾಜ್ಯದ ಹಿತದ ಪ್ರಶ್ನೆ. ಆಮೇಲೆ ಮಾನ್ಯ ಸದಸ್ಯರು ಆಂಧ್ರಪ್ರದೇಶದ ಮುಖ್ಯಮಂತ್ರಿಯವರ ಹೇಳಿಕೆಯನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನು ನೋಡಿದ್ದೇನೆ. ಸ್ವಾಮಿ ಅವರಿಗೆ ಮಾಡಿಕೊಳ್ಳುವುದಕ್ಕೆ ಹಕ್ಕು ಇದ್ದರೆ. ಅವರು ಕೇಂದ್ರ ಸರ್ಕಾರದ ಅನುಮತಿಯನ್ನು ಏಕೆ ಕೇಳಬೇಕಾಗಿತ್ತು ? ಅವರೇ ಮಾಡಿಕೊಳ್ಳಬಹುದಿತ್ತು. ಅವರಿಗೂ ಕೂಡ ಕೆಲವು ಇತಿಮಿತಿ ಇದೆ. ಅದನ್ನು ಅವರು ತಿಳಿದುಕೊಂಡರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಫಸ್ಟ್ ಫೇಸ್‌ನ ಫಸ್ಟ್ ವರ್ತ್ಸು ಸೆಕೆಂಡ್ ಸ್ಟೇಜ್ ಹಾಗೂ ಸೆಕೆಂಡ್ ಫೇಸ್‌ನ ಫಸ್ಟ್ ಮತ್ತು ಸೆಕೆಂಡ್ ಸ್ಟೇಜ್–ಹೀಗೆ ನಾಲ್ಕು ಸ್ಟೇಜ್‌ಗಳಲ್ಲಿ ಕೆಲಸ ಮುಗಿಸತಕ್ಕಂಥ ವಿವರಗಳನ್ನು ಕೊಟ್ಟಿದ್ದಾರೆ. ಈಗ ಅವರು ಹೇಳತಕ್ಕದ್ದು ಫಸ್ಟ್ ಫೇಸ್‌ನಲ್ಲಿ ಒಂದು ಮತ್ತು ಎರಡನೇ ಸ್ಟೇಜ್‌ನದ್ದು ಮುಗಿಸುವುದನ್ನು ಹೇಳುತ್ತಿದ್ದಾರೋ, ಅಥವಾ ಎರಡನೇ ಫೇಸ್‌ನದ್ದು ಕೂಡ ಒಟ್ಟಿಗೆ ಸೇರಿಸಿ ೧೦೭೧ ಕೋಟಿ ರೂಪಾಯಿ ಆಗುತ್ತದೆಯೋ ? ಇದನ್ನು ಅವರಿಂದ ದಯವಿಟ್ಟು ಸ್ಪಷ್ಟಪಡಿಸಬೇಕು. ಎರಡನೆಯದಾಗಿ ಅವರು ಹೇಳುವುದರಲ್ಲಿ ಅರ್ಥ ಇದೆ. ಇದಂ ಒಂದು ಕಡೆ ಕೇಂದ್ರ ಸರ್ಕಾರದವರನ್ನು ಕೇಳಬೇಕೆಂದು ಹೇಳುತ್ತಾರೆ, ಅರ್ಜಿ ಹಾಕಿದ್ದಾರೆ. ನೆಗೊಷಿಯೇಶನ್‌ಗೆ ಕರೆಯುತ್ತಾರೆ. ನಾವು ಕೂಡ ಕೇಳುತ್ತಿದ್ದೇವೆ. ಈ ಪರಿಧಿದಲ್ಲಿ ನಮ್ಮ ಈ ಪ್ರಾಜೆಕ್ಟ್ ತಡವಾದರೆ ಈಗ ಯಾವ ರೀತಿಯಾಗಿ ತಮಿಳುನಾಡಿನವರು ನಮಗೆ ನೀರು ಕೊಡಿ ಎಂದು ಕೇಳಿದಾಗ, ಮಾನವೀಯತೆ ದೃಷ್ಟಿಯಿಂದ ನೀರು ಬಿಡುತ್ತಿದ್ದೇವೆಯೋ ಇದೇ ರೀತಿ ನಾಳೆ ಆಂಧ್ರಪ್ರದೇಶದವರು ತಮ್ಮ ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡಿದ ಮೇಲೆ ತಮಗೂ ನೀರು ಕೊಡಿ ಸ್ಟ್ಯಾಂಡಿಂಗ್ ಕ್ರಾಪ್ ಡಿಸ್ಟಾಯ್ ಆಗುತ್ತದೆ, ಅದನ್ನು ಉಳಿಸಿ ಎಂದು ಪದೇ ಪದೇ ಕೇಳುತ್ತಾರೆ ಆಗ ಏನು ಮಾಡುತ್ತೀರಿ ? ಆದ್ದರಿಂದ ಅವರು ಪೂರ್ಣಗೊಳಿಸುವುದಕ್ಕೆ ಮುಂಚೆ ನಾವು ಏಕೆ ಒಳ್ಳೆ ಕಾರ್ಯಕ್ರಮ ಹಾಕಿಕೊಳ್ಳಬಾರದು ಎಂದು ಕೇಳುತ್ತೇನೆ. ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಯವರು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಾರ್ಯಕ್ರಮ ಏನು ಅಂತ ಹೇಳಿದ್ದೇನೆ. ೧೧೯ ಟಿ.ಎಂ.ಸಿ. ನೀರನ್ನು ೧೯೮೫–೮೬ನೇ ಇಸವಿಯ ಅಂತ್ಯದೊಳಗೆ ಪೂರ್ಣವಾಗಿ ಬಳಕೆ ಮಾಡಬೇಕೆನ್ನುವುದು ಸರ್ಕಾರದ

ಕಾರ್ಯಕ್ರಮಗಳಲ್ಲಿ ಒಂದು. ಇದಾದ ಮೇಲೆ ೭ ಜಿಲ್ಲೆಗಳಲ್ಲಿ ೧೫ ಟಿ.ಎಂ.ಸಿ. ಯನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಅಲಾಟ್ ಮಾಡಿದ್ದರಲ್ಲಿ, ೩೧ ಟಿ.ಎಂ.ಸಿ. ಗಾಗಿ ೨ ೦ ಕೋಟಿ ರೂಪಾಯಿಗಳನ್ನು ೧೯೮೬ ರಿಂದ ೨ ಸಾವಿರ ಇಸವಿಯೊಳಗೆ ಅಂದರೆ ನಾಲ್ಕು ವರ್ಷದೊಳಗೆ ಖರ್ಚು ಮಾಡಿ ಆದನ್ನು ಉಪಯೋಗ ಮಾಡಿಕೊಳ್ಳಬೇಕು. ಇದು ಎರಡನೇ ಕಾರ್ಯಕ್ರಮ. ಇದಕ್ಕೆ ಏನು ಸಿದ್ಧತೆ ಮಾಡಿದ್ದೀರಿ ? ಎಂದು ಕೇಳಿದ್ದೇ ಆದರೆ, ಮೊದಲನೇ ಸ್ಟೇಜ್‌ನಲ್ಲಿ ಫಸ್ಟ್ ಫೇಸ್ ಅನ್ನು ೩೬೦ ಕೋಟಿ ರೂಪಾಯಿ ಖರ್ಚು ಮಾಡಿ ಮುಗಿಸುವ ಒಂದು ವ್ಯವಸ್ಥೆ ಆಗಿದೆ. ಇನ್ನು ಉಳಿದಿರುವಂತಾದ್ದು ಎರಡನೇ ಫೇಸ್‌ನಲ್ಲಿ ೫೧೦ ಕೋಟಿ ರೂಪಾಯಿಯ ಒಂದು ಫೇಸ್ ಅನ್ನು ತಯಾರು ಮಾಡಿ ವಿಶ್ವಬ್ಯಾಂಕಿನ ಮುಂದೆ ಇಟ್ಟಿದ್ದೇವೆ. ಇದಕ್ಕೆ ಅನುಮತಿ ಕೊಡಿ ಎಂದು ಕೇಂದ್ರದವರನ್ನು ಕೇಳಿದ್ದೇವೆ. ಇದು ನಾವು ತೆಗೆದುಕೊಂಡ ಕಾರ್ಯಕ್ರಮಗಳು. ನಾವು ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಂಡ ಮೇಲೆ ಅಂದರೆ ಕ್ರಿ ಶ. ೨೦೦೦ ಇಸವಿಯು ಆದ ಮೇಲೆ ನಾವು ಮತ್ತು ನೀವು ಪಂಚಾಯಿತಿದಾರರ ಮೂಲಕ ಚರ್ಚೆ ಮಾಡಿ ಮುಂದೆ ನಮ್ಮ ಪಾಲಿನ ನೀರನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬುದನ್ನು ಯೋಚನೆ ಮಾಡೋಣ.

ಉಪಾಧ್ಯಕ್ಷರು. — ಈಗ ಪ್ರಶ್ನೋತ್ತರ ಕಾಲದ ಅವಧಿ ಮುಗಿಯುತ್ತಾ ಬಂದಿದೆ. ಆದ್ದರಿಂದ ಈಗ ಮಾನ್ಯ ಕಡಪಟ್ಟಿ ಅವರು ಮಾತ್ರ ಉಪಪ್ರಶ್ನೆ ಕೇಳಲಿ.

ಶ್ರೀ ಎಸ್. ಎಸ್. ಕಡಪಟ್ಟಿ — ಮಾನ್ಯ ಮಂತ್ರಿಗಳು ೨ ಸಾವಿರದ ಇಸವಿಯೊಳಗೆ ನಮ್ಮ ಪಾಲಿನ ಎಲ್ಲ ನೀರನ್ನು ಉಪಯೋಗ ಮಾಡುತ್ತೇವೆಂದು ಹೇಳಿದರು. ಈ ಹಿಂದಿನ ಮಂತ್ರಿಗಳು ಹೇಳಿದಂತೆ ಇವರೂ ಸಹ ಹೇಳುತ್ತಿದ್ದಾರೆ. ನಮ್ಮ ಪಾಲಿನ ನೀರನ್ನು ಪೂರ್ಣವಾಗಿ ಬಳಸಿಕೊಳ್ಳಬೇಕಾದರೆ ವರ್ಷಕ್ಕೆ ಇಂತಿಷ್ಟೇ ಹಣ ಖರ್ಚು ಮಾಡುತ್ತೇವೆಂದು ಸನ್ಮಾನ್ಯ ದೇವೇಗೌಡರು ಕರ್ನಾಟಕದ ಜನತೆಗೆ ಆದರಲ್ಲಿಯೂ ಬರಗಾಲ ಪೀಡಿತ ಜನತೆಗೆ ಭರವಸೆ ಕೊಡಬೇಕು. ವರ್ಷಕ್ಕೆ ನೂರು ಕೋಟಿ ರೂಪಾಯಿಗಳ ಪ್ರಕಾರ ಖರ್ಚು ಮಾಡಿದರೆ ಸರಿಹೋಗುವುದಿಲ್ಲ. ಕೊನೆಯ ಪಕ್ಷ ವರ್ಷಕ್ಕೆ ೨೦೦ ಅಥವಾ ೨೫೦ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡುತ್ತೇವೆಂದು ಈ ಸದನಕ್ಕೆ ಭರವಸೆ ಕೊಡಬೇಕು. ಇಲ್ಲದಿದ್ದರೆ ಏನೂ ಉಪಯೋಗವಾಗುವುದಿಲ್ಲ. ಪ್ಲೀಸ್ ; ಲಕ್ಷ್ಮೀಸಾಗರ್ ಅವರು ಕೊಡುವಂತಹ ಉತ್ತರವನ್ನು ನಾವು ಸ್ವತಃ ಇಂಜಿನೀಯರ್ ಆದಂಥ ಶ್ರೀ ದೇವೇಗೌಡರಿಂದ ನಿರೀಕ್ಷೆ ಮಾಡಿರಲಿಲ್ಲ. ಇದನ್ನು ಪರಿಶೀಲನೆ ಮಾಡುತ್ತೇವೆ, ಈ ಪ್ರಶ್ನೆ ಉದ್ಭವವಾಗುವುದಿಲ್ಲ ಎನ್ನುವಂತಹ ಹಾರಿಕೆ ಉತ್ತರ ನಮಗೆ ಬೇಡ. ನಿರ್ದಿಷ್ಟವಾಗಿ ಹೇಳಲಿ. ಬೇಕಾದರೆ ಒಂದು ವಾರದ ಸಮಯ ತೆಗೆದುಕೊಂಡು ಉತ್ತರ ಹೇಳಲಿ. ಕೃಷ್ಣಾ ಕಣಿವೆಗೆ ಸೇರಿದ ಎಲ್ಲ ಶಾಸಕರನ್ನು ಕರೆದು ಅರ್ಧ ಗಂಟೆಯ ಕಾಲ ಚರ್ಚೆ ಮಾಡಿ ಉತ್ತರ ಕೊಡಲಿ. ಒಟ್ಟಿನಲ್ಲಿ ಈ ಬಗ್ಗೆ ಒಂದು ದೃಢವಾದಂಥ ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ. ಎಚ್. ಪಾಟೀಲ್. — ಮಾನ್ಯ ಕಡಪಟ್ಟಿ ಅವರು ಹೇಳಿದ್ದನ್ನು ನಾವು ಸಹ ಒಪ್ಪುತ್ತೇವೆ. ಈ ಯೋಜನೆಯನ್ನು ಪೂರ್ಣವಾಗಿ ಸಕಾಲದಲ್ಲಿ ಮುಗಿಸಿಕೊಡಬೇಕು. ಈ ಬಗ್ಗೆ ಮಾನ್ಯ ದೇವೇಗೌಡರು ನಮಗೆ ಭರವಸೆ ಕೊಡಬೇಕು.

ಶ್ರೀ ಎಚ್ ಡಿ. ದೇವೇಗೌಡ. — ನಾನು ಕಾನೂನು ತಜ್ಞನಲ್ಲ ಹಾಗೂ ತಾಂತ್ರಿಕ ತಜ್ಞನೂ ಅಲ್ಲ. ಆದ್ದರಿಂದ.....

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ. — ಮಾನ್ಯಮಂತ್ರಿಗಳು ಇಲ್ಲಿಯವರೆಗೆ ತಜ್ಞರು ಹೇಳಿದಂತೆ ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ. — ಈ ಹಿಂದೆ ಮಾನ್ಯ ಕೆ. ಎಚ್. ಪಾಟೀಲ್ ಅವರು ಮಂತ್ರಿಗಳಾಗಿದ್ದಾಗ ಈ ಯೋಜನೆಯನ್ನು ಸೆಂಟ್ರಲಿ ಸ್ಪಾನ್‌ಸರ್ಡ್ ಸ್ಕೀಮ್ ಆಗಿ ತೆಗೆದುಕೊಳ್ಳಬೇಕು ಮತ್ತು ಫಿಟ್-ಸೈಡ್ ದಿ ಪ್ಲಾನ್ ಆಗಿ ತೆಗೆದುಕೊಳ್ಳಬೇಕು ಎಂದು ಒಂದು ತೀರ್ಮಾನವನ್ನು ಮಾಡಿದ್ದರು. ಈಗ ಪ್ರತಿವರ್ಷವೂ ಇದಕ್ಕೆ ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಮತ್ತೊಂದು ತೀರ್ಮಾನವನ್ನು ಮಾಡಿದರೆ, ಅದಕ್ಕೆ ನನ್ನ ಆಭ್ಯಂತರವೇನೂ ಇಲ್ಲ.